**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿಸಿ ನಂಬರ : 1294/2023**

| | | | |
|---|---|---|---|
| ಸಾಕ್ಷಿಯ ಹೆಸರು | : ಎ ಜಿ ಸ್ವಾಮಿ | ಸಿ.ಡಬ್ಲ್ಯು | 1 |
| ತಂದೆಯ ಹೆಸರು | : ಸತ್ಯಣ್ಣ | ಪಿ.ಡಬ್ಲ್ಯು | 1 |
| ವಯಸ್ಸು | : 27 ವರ್ಷ | | |
| ಉದ್ಯೋಗ | : ಕೂಲಿ | | |
| ವಾಸ ಸ್ಥಳ | : ಜಾಲಿಹಳ್ಳ , ರಾಯದುರ್ಗಾ ತಾಲ್ಲೂಕು. | | |

**ದಿನಾಂಕ: 02-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-**

ನನಗೆ ಚಾಸಾ-2, 3, 6 ರಿಂದ 14 ಮತ್ತು ಆರೋಪಿಯ ಪರಿಚಯ ಇರುತ್ತದೆ. ಮೃತ ಚಿತ್ತಣ್ಣ ರವರ ಪರಿಚಯ ಕೂಡಾ ಇರುತ್ತದೆ. ಚಿತ್ತಣ್ಣ ಇತನು ದಿನಾಂಕ 14-06-2024. ರಂದು ಅಪಘಾತದಲ್ಲಿ ತೀರಿಕೊಂಡಿದ್ದಾರೆ. ಅಪಘಾತವು ತರೀಕೆರೆ ತಾಲ್ಲೂಕಿನ ಒಂದುಹಳ್ಳಿಯಲ್ಲಿ ಆಗಿರುತ್ತದೆ. ಅಪಘಾತ ಆದ ದಿವಸ ನಾನು, ಮೃತ ವ್ಯಕ್ತಿ ಮತ್ತು ಆರೋಪಿ ಕುರಿಗೊಬ್ಬರವನ್ನು ಅನ್‌ಲೋಡ್ ಮಾಡಲು ಬಂದಂತಹ ಸಮಯದಲ್ಲಿ ಅಪಘಾತ ಆಗಿರುತ್ತದೆ. ಆಗ ನಾನು ಸ್ಥಳದಲ್ಲಿ ಇರಲಿಲ್ಲ. ಬಹಿರ್ದೆಸೆಗೆ ಹೋಗಿದ್ದೆ. ಆಗ ಸಮಯ 11 ಗಂಟೆ ಆಗಿರಬಹುದು. ಚಿತ್ತಣ್ಣ ಲಾರಿಯ ಹಿಂದುಗಡೆ ಬಿದಿದ್ದನು. ಎದೆ ಮತ್ತು ಕೈ ಕಾಲಿಗೆ ಪೆಟ್ಟುಗಳು ಆಗಿದ್ದವು. ಅಪಘಾತ ಹೇಗಾಯಿತು, ಯಾರ ತಪ್ಪಿನಿಂದಾಯಿತು ಎಂದು ನೋಡಿಲ್ಲ ಮತ್ತು ನನಗೆ ಮಾಹಿತಿ ಇರುವುದಿಲ್ಲ. ತರೀಕೆರೆ ಆಸ್ಪತ್ರೆಯಲ್ಲಿ ಚಿತ್ತಣ್ಣನು ಮರಣ ಹೊಂದಿದ್ದಾನೆ ಎಂದು ನನಗೆ ಗೊತ್ತಾಯಿತು. ಒಬ್ಬ ಮಹೇಶ ಎಂಬುವವರು ಅಂದರೆ ಚಾಸಾ-13 ನಾವು ಬಂದ ಲಾರಿಯ ಮಾಲೀಕರು ಇರುತ್ತಾರೆ. ಆರೋಪಿ ಚಾಲಕನಾಗಿದ್ದನು. ಈ ಬಗ್ಗೆ ಪೊಲೀಸರು ದೂರು ಬರೆಸಿಕೊಂಡಿದ್ದಾರೆ ಅದರಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ದೂರನ್ನು ನಿಪಿ.1, ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ಚಿತ್ತಣ್ಣ ಮರಣ ಹೊಂದಿದ ವಿಷಯವನ್ನು ಅವರ ಮನೆಗೆ ನಾನೇ ಕರೆ ಮಾಡಿ ತಿಳಿಸಿದ್ದೇನೆ. ಈಗ ತೋರಿಸುತ್ತಿರುವ ಸಹಿಗಳು ನನ್ನದೇ ಇರುತ್ತವೆ. ಸದರಿ ಸಹಿ ಇರುವ ದಾಖಲೆ ಸ್ಥಳ ಮತ್ತು ಅಮಾನತಪಂಚನಾಮೆ ಆಗಿದ್ದು ಅದನ್ನು ನಿಪಿ.2 ಮತ್ತು 3, ಸಾಕ್ಷಿ ಸಹಿಯನ್ನು ನಿಪಿ.2 ಎ ಮತ್ತು 3 ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಠಾಣೆಯಲ್ಲಿ ಸಹಿ ಹಾಕು ಎಂದು ಕಾರಣ ಹಾಕಿದ್ದೇನೆ. ಈಗ ತೋರಿಸುತ್ತಿರುವ ಫೋಟೊಗಳಲ್ಲಿ ನಾನು ಇದ್ದೇನೆ, ಪೊಲೀಸರು ಹೇಳಿದ ಕಾರಣ ನಿಂತು ಫೋಟೊ ತೆಗೆಸಿಕೊಂಡಿದ್ದೇನೆ. ಫೋಟೊಗಳನ್ನು ನಿಪಿ.4 ರಿಂದ 6 ಎಂದು ಗುರುತಿಸಲಾಯಿತು. ಸದರಿ ಫೋಟೊಗಳ ಬಗ್ಗೆ ಕೂಡಾ ನನಗೆ ಹಚ್ಚಿನ ಮಾಹಿತಿ ಇಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-</u>**

ಮೇಲೆ ಹೇಳಿದ ದಿನಾಂಕದಂದು ಆರೋಪಿಯು ಚಾಸಾ-13 ರವರಿಗೆ ಸೇರಿದ ಲಾರಿಯಲ್ಲಿ ಗೊಬ್ಬರ ತುಂಬಿಕೊಂಡು ತರೀಕೆರೆಯ ಕುಂಟಿನಮಡು ಗ್ರಾಮಕ್ಕೆ ಬಂದು ಗೊಬ್ಬರವನ್ನು ಚಾಸಾ-14 ರವರ ತೋಟದಲ್ಲಿ ಅನ್ ಲೋಡ್ ಮಾಡುವ ಸಲುವಾಗಿ ಗಾಡಿಯನ್ನು ಹಿಮ್ಮುಖವಾಗಿ ಚಲಾಯಿಸುವ ಕಾಲಕ್ಕೆ ವೇಗ ಮತ್ತು ನಿಷ್ಕಾಳಜಿತನದಿಂದ ಚಾಲನೆ ಮಾಡಿದ ಕಾರಣ ಲಾರಿಯ ಹಿಂಬದಿಯಲ್ಲಿ ಸೂಚನೆ ನೀಡುತ್ತಿದ್ದ ಮೃತ ಚಿತ್ತಣ್ಣನಿಗೆ ಹಾಯಿಸಿ ಅಪಘಾತ ಪಡಿಸಿದ ಕಾರಣ ಆತನು ಸ್ಥಳದಲ್ಲಿಯೇ ಮರಣ ಹೊಂದಿದನು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಸ್ಥಳದಲ್ಲಿಯೇ ಇದ್ದೆ ಎಂದರೆ ಸರಿಯಲ್ಲ. ನಾವೇ ಶರೀರವನ್ನು ಆಸ್ಪತ್ರೆಗೆ ತಂದಿದ್ದೇವೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳ ಬಗ್ಗೆ ಮಾಹಿತಿ ಇದ್ದರೂ ಕೂಡಾ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ತೋರಿಸಿದ ಸ್ಥಳದಲ್ಲಿ ಅಪಘಾತದ ಮರದಿವಸ ನಿಪಿ.2 ರಂತೆ ಸ್ಥಳ ಪಂಚನಾಮೆ ಮತ್ತು ನಿಪಿ.3 ರಂತೆ ಅಮಾನತುಪಂಚನಾಮೆ ಜರುಗಿಸಿದ್ದಾರೆ ಎಂದರೆ ಸರಿಯಲ್ಲ. ಆ ಸಮಯಕ್ಕೆ ಚಾಸಾ-4 ಮತ್ತು 5 ರವರು ಹಾಜರಿದ್ದರು ಎಂದರೆ ಸರಿಯಲ್ಲ. ಅದೇ ಸಮಯಕ್ಕೆ ನಿಪಿ.4 ರಿಂದ 6 ಫೋಟೊಗಳನ್ನು ತೆಗೆಸಿದ್ದಾರೆ ಎಂದರೆ ಸರಿಯಲ್ಲ. ಮೃತ ಚಿತ್ತಣ್ಣನ ಸಾವಿಗೆ ಆರೋಪಿಯ ದುಡುಕಿನ ಮತ್ತು ನಿಷ್ಕಾಳಜಿತನದ ಚಾಲನೆಯೇ ಕಾರಣ ಎಂದು ಗೊತ್ತಿದ್ದರಾ ಸಹ ಆರೋಪಿಯನ್ನು ಈ ಪ್ರಕರಣದಿಂದ ದೋಷ ಮುಕ್ತಗೊಳಿಸಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

**<u>ಮರುವಿಚಾರಣೆ :</u>** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

*ಓ ಹೇ ಕೇ ಸ ಇ ಎ ಒ*

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***